ISSN: 2347-2723 IMPACT FACTOR : 3.3754(UIF) VOLUME - 5 | ISSUE - 2 | SEPTEMBER - 2017

REVIEW OF LITERATURE

# ಸಿದ್ಧಲಿಂಗಯ್ಯ ನವರ ಕಾವ್ಯಗಳಲ್ಲಿ ದಲಿತ ಚಿತ್ರಣ

**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**



ಡಾ.ಸಿದ್ಧಲಿಂಗಯ್ಯನವರು ಬೆಂಗಳೂರು ಜಿಲ್ಲೆಯ ರಾಮನಗರ ತಾಲೂಕಿನ ಮಂಚನಬೆಲೆಯಲ್ಲಿ ೩–೨–೧೯೫೪ರಂದು ಜನಿಸಿದರು. ತಂದೆ ದೇವಯ್ಯ, ತಾಯಿ ವೆಂಕಟಮ್ಮ, ಸಿದ್ಧಲಿಂಗಯ್ಯನವರು ಸಹಜ, ನೇರ, ನಿಷ್ಠುರ, ಶಕ್ತಿವಂತ ಕವಿ. ಸಾಮಾಜಿಕ ಕಾಳಜಿಯುಳ್ಳ ಇವರು ಅಸಮಾನತೆಗೆ ಕಾರಣವಾದ ವ್ಯವಸ್ಥೆಯ ವಿರುದ್ಧವಾಗಿ ರೋಷದ ಕಾವ್ಯ ರಚಿಸುತ್ತಾರೆ. ಹಸಿವು, ಬಡತನ, ದಾರಿದ್ರ್ಯ, ನಿರುದ್ಯೋಗ ಎಲ್ಲಕ್ಕಿಂತ ಹೆಚ್ಚಾಗಿ ಶ್ರೇಣಿಕೃತ ವ್ಯವಸ್ಥೆಯಲ್ಲಿ ದಲಿತರು ಅನುಭವಿಸುವ, ನೋವು, ಸಂಕಟ, ಸಾಮಾಜಿಕ ಕಾಳಜಿಯುಳ್ಳ ಇವರು ಅಸಮಾನತೆಗೆ ಕಾರಣವಾದ ವ್ಯವಸ್ಥೆಯ ವಿರುದ್ಧವಾಗಿ ರೋಷದ ಕಾವ್ಯ ರಚಿಸುತ್ತಾರೆ. ಹಸಿವು, ಬಡತನ, ದಾರಿದ್ರ್ಯ, ನಿರುದ್ಯೋಗ ಎಲ್ಲಕ್ಕಿಂತ ಹೆಚ್ಚಾಗಿ ಶ್ರೇಣಿಕೃತ ವ್ಯವಸ್ಥೆಯಲ್ಲಿ ದಲಿತರು ಅನುಭವಿಸುವ, ನೋವು, ಸಂಕಟ, ಸಾಮಾಜಿಕ ಅಸಮಾನತೆಯ ಪರಿಣಾಮಗಳು ಇವರ ಕಾವ್ಯದ ವಸ್ತುಗಳಾಗಿವೆ. ಶೋಷಿತ ಸಮುದಾಯದ ಪರವಾದ ಇವರ ಕಾವ್ಯ, ವ್ಯಕ್ತಿಗತ ನೆಲೆಯಿಂದ ಸಾಮುದಾಯಿಕ ಅಭಿವ್ಯಕ್ತಿಯಾಗಿ ರೂಪ ತಳೆಯುತ್ತದೆ.

"ನವ್ಯ ಕಾವ್ಯದ ಅವಸಾನ ಕಾಲದಲ್ಲಿ ಸಾಹಿತ್ಯಿಕ ಹಾಗೂ ಸಾಮಾಜಿಕ ವಲಯಕ್ಕೆ ಹೊಸ ಆಲೋಚನೆ ಹಾಗೂ ಅಭಿವ್ಯಕ್ತಿಯನ್ನು ನೀಡಿದ ಪ್ರಮುಖರಲ್ಲಿ ಸಿದ್ಧಲಿಂಗಯ್ಯ ಒಬ್ಬರು ದಲಿತ ಕವಿ ಎಂದೇ ಪ್ರಖ್ಯಾತರಾದ ಇವರು ದಲಿತ ಹೋರಾಟ ಹಾಗು ಸಾಮಾಜಿಕ ಸಮಾತೆಗಾಗಿ ಎತ್ತರದ ದನಿಯಲ್ಲಿ ಕಾವ್ಯವನ್ನು ಹಾಡನ್ನಾಗಿ ಮಾರ್ಪಡಿಸಿದರು. ಸಿದ್ಧಲಿಂಗಯ್ಯನವರ ಸಾಹಿತ್ಯವು ಒಂದು ಪ್ರಮುಖ ಸಾಂಸ್ಕೃತಿಕ ದಾಖಲೆಯಾಗಿದೆ. ಒಂದು ಅಲಕ್ಷಿತ ಸಮುದಾಯದ ಅನುಭವಗಳನ್ನು ಯಾವ ಮುಲಾಜು ಇಲಲ್ದೆ, ಒಂದು ದಶಕದಲ್ಲಿ ಕಾವ್ಯವಾಗಿಸಿದ ದಲಿತ ಕವಿ ಸಿದ್ಧಲಿಂಗಯ್ಯ ಹಲವು ಕ್ಷೇತ್ರಗಳಲ್ಲಿ ಪರಿಣಿತರಾಗಿದ್ದಾರೆ".[೧] ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಿದ್ಧಲಿಂಗಯ್ಯನವರು ಅಭಿವ್ಯಕ್ತಿಯ ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಿದ್ದಾರೆ.

ಶೋಷಣೆಗೆ ಒಳಗಾದ ಜನ, ಶೋಷಿತ ಶಕ್ತಿಗಳನ್ನು ಕಿತ್ತೆಸೆಯಲು ಒಂದಾಗಿ ಹೇಗೆ ಬಂದರು ಎಂಬುದನು ಈ ಕವನದಲ್ಲಿ ಸಮರ್ಥವಾಗಿ ವ್ಯಕ್ತಪಡಿಸಿದ್ದಾರೆ.

"ಕಪ್ಪು ಮುಖ, ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು
.....................................................................
...................................................................
ಎಲ್ಲೆಲ್ಲೊ ನನ್ನ ಜನ ನೀರಿನಂತೆ ನಿಂತರು"[೨]

ನಿನ್ನೆ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಲು ದಲಿತರು ಬೆಟ್ಟದಂತೆ ಅಪಾರ ಸಂಖ್ಯೆಯಲ್ಲಿ ಹರಿದು ಬಂದರು. ಕಪ್ಪು ಮುಖ, ಬಿಳಿಯ ಗಡ್ಡ ಉರಿಯುತ್ತಿರುವ ಕಣ್ಣುಗಳು ಈ ಜನರು ಹಗಲು ರಾತ್ರಿಗಳನ್ನು ಸೀಳಿ ನಿದ್ದೆಯನ್ನು ಒದ್ದು ಬಂದರು. ಇವರು ಎದ್ದೆಳುವ ರೊಚ್ಚಿಗೆ ಕಂಬಳಿಗಳು ಕೊರಗಿದವು. ಇವರ ಕುಣಿತಕ್ಕೆ ಭೂಮಿ ಕಂಪಿಸ ತೊಡಗಿತು. ಇರುವ ಸಾಲುಗಳಂತೆ ಹರಿವ ಈ ಜನರು ಸಿಂಹ ಹುಲಿಗಳ ಘರ್ಜನೆಯಂತೆ ಕೂಗುವ ಧಿಕ್ಕಾರ ಘೋಷಣೆಗಳು ಅಸಮಾನತೆಗೆ ಧಿಕ್ಕಾರ ಧಿಕ್ಕಾರ, ಶ್ರೀಮಂತರ ಸೊಕ್ಕಿಗೆ

ಎಂದೆಂದಿಗೂ ಧಿಕ್ಕಾರ ಧಿಕ್ಕಾರ ಶೋಷಿಕರಲ್ಲಿ ನಡುಕವನ್ನುಂಟು ಮಾಡಿತು. ಅಪಾರ ಸಂಖ್ಯೆಯಲ್ಲಿ ಬಂದ ಈ ಜನ ಲಕ್ಷಾಂತರ ನಾಗರ ಹಾವುಗಳು ಒಮ್ಮೆಲೇ ಹುತ್ತಿನಿಂದ ಹೊರ ಬಿದ್ದು ಊರು ತುಂಬ ಹರಿದಂತೆ ಪಾತಾಳಕ್ಕೆ ಇಳಿದಂತೆ ಆಕಾಶಕ್ಕೆ ನೆನೆದಂತೆ, ಬೀದಿಯಲ್ಲಿ ಗಲ್ಲಿಯಲ್ಲಿ ಬೇಲಿ ಮಳೆಯ ಮರೆಯಲ್ಲಿ ಯಜಮಾನರ ಹೊಟ್ಟೆಯಲ್ಲಿ ಧಣಿ ಕೊಡುವ ಪಟ್ಟದಲ್ಲಿ ಎಲ್ಲೆಲ್ಲೂ ಈ ಜನ ನೀರಿನಂತೆ ನಿಂತರು ಪ್ರತಿಭಟಿಸಿದರು.

"ಇವರು ಬಾಯಿ ಬಿಟ್ಟೊಡನೆ

..................................

..................................

ಸಾವಿರಾರು ನದಿಗಳು"[೩]

ದಲಿತ ಜನರ ಪ್ರತಿಭಟನೆಯ ಕೂಗಿಗೆ ಶೋಷಕರ ಬಾಯಿ ಕಟ್ಟಿತು. ಇವರ ಧ್ವನಿ ಕಪಿಳಿ ಅವರ ಧ್ವನಿ ಇಂಗಿತು. ಕ್ರಾಂತಿಯ ಬಿರುಗಾಳಿಯಲ್ಲಿ ನನ್ನ ಜನ ಕೈ ಬೀಸಿ ಛಡಿಯ ಏಟು ಹೊಡೆದವರ ಕುತ್ತಿಗೆ ಹಿಡಿದರು. ಪೋಲಿಸ ದೊಣ್ಣೆಗಳು ಏಜೆಂಟರ ಕತ್ತಿಗಳು ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣಗಳು ತರಗೆಲೆ ಕಸಕಡ್ಡಿಯಾಘಿ ತೇಲಿ ತೇಲಿ ಹರಿದವು. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಬಂದು ಸೇರಿ ಪ್ರತಿ ಭಟನಾತ್ಮಕ ಚಳುವಳಿಯನ್ನು ಯಶಸ್ವಿಗೊಳಿಸಿದರೆಂದು ಕವಿಯು ವ್ಯಕ್ತಪಡಿಸಿದ್ದಾರೆ.

'ಚೋಮನ ಮಕ್ಕಳ ಹಾಡು' ಚೋಮ, ಶೋಷಿತರ ಕಲಿತರ, ಸಂಕೇತವಾಗಿದೆ.

"ಕಾಳ ನೀಲ ಬೆಳ್ಳಿ ಗುರವ ಚೆನಿಯ

................................................

................................................

ಚೋಮನ ಎಲುಬುಗಳು"[೪].

ಸಿದ್ಧಲಿಂಗಯ್ಯ ಚೋಮನ ಮಕ್ಕಳುಹಾಡು ಕವನದಲ್ಲಿ ದಲಿತರ ನೋವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ದಲಿತ ಅನಾಥ ಮಕ್ಕಳು ತಮ್ಮ ಪರಂಪರಾಗತ ನೋವಿನ ನೆನಪು ಮಾಡಿಕೊಳ್ಳುವವರಿಗೆ ದಲಿತ ಪ್ರಜ್ಞೆಯನ್ನು ಜಾಗೃತ ಮಾಡುತ್ತಾರೆ. ಕಾಳ, ನೀಲ, ಬೆಳ್ಳಿ, ಗುರುವ ಚೋಮನ ಮಕ್ಕಳು ಕಣ್ಣಲ್ಲಿ ನೋವು ಕರುವವರು, ಮಣ್ಣಿನಲ್ಲಿ ಮುಖ ಇಟ್ಟವರು. ತಾಯಿಯನ್ನು ಅಗಲಿದ ಅನಾಥ ಮಕ್ಕಳಾದ ಅವರು ನೋವನ್ನು ಅಪ್ಪಿಕೊಂಡರು. ಅವರ ದೇಹ ಉಕ್ಕಿನಂತೆ ಕಾಠಿಣ್ಯ ಹೊಂದಿದ್ದರೂ ಹೂವಿನಂಥ ಮನಸ್ಸು ಹೊಂದಿರುವವರು. ಮಾಡುವ ಭೂಮಿಯ ಗೇಣಿಯ ಕನಸು ಅವರದು. ಭೂಮಿ ತಾಯಿಯ ಮಲಮಕ್ಕಳು ನಾವು ಚೋಮನ ಎಲಬುಗಳು ಎಂದು ವ್ಯಥೆ ಪಡವರು.

"ಒಡೆಯರ ಸುಂದರ ತೋಟದ ಒಳಗೆ

.....................................................

....................................................

ಕೇಳಿರಿ ಸ್ವಾಮಿ ಈ ಹೊತ್ತು"[೫]

ಒಡೆಯರ ಸುಂದರ ತೋಟದ ಒಳಗೆ ಅರಳುವ ಹೂವಿನ ದಳ ದಳದಲ್ಲಿ ಅಪ್ಪ ಚೋಮನ ಬೆವರಿನ ರಕ್ತವು ಸೋರಿ ಹೂವು ಕೆಂಪಾದವು ಎಂದು ಶೋಷಣೆ ರೀತಿಯನ್ನು ಹೇಳುವರು. ಧಣಿಗಳ ಹಬ್ಬದ ಊಟಕ್ಕಾಗಿ ಖಮಡವನ್ನು ಕಿತ್ತು ಕೊಟ್ಟವರು ಚೋಮನ ಮಕ್ಕಳು ನೆಲದ ಆಧಾರ ತಪ್ಪಿದವರು ಮುಗಿಲಿನ ಆಸರೆ ಸಿಗದವರು ಇವರು ಭೂಮಿ ಬೆಟ್ಟ ನೀಲಿಯ ಆಕಾಶ ಹಾಗೂ ನಮ್ಮ ನಾಡಿನ ಎಲ್ಲಾ ಜನತೆಗೆ ಚೋಮನ ಹೆಸರು ಗೊತ್ತು. ಚೋಮನ ಮಕ್ಕಳಾದ ನಮ್ಮ ಕಥೆಯನ್ನು ಈ ಹೊತ್ತು ಹೇಳುತ್ತೇವೆ ಸ್ವಲ್ಪ ಕೇಳಿರಿ ಎಂದು ವಿನಮ್ರತೆಯಿಂದ ಕೇಳಿಕೊಳ್ಳುವರು.

"ಸುಟ್ಟಾವು ಬೆಳ್ಳಿ ಕಿರಣ" ಎಂಬುವುದು ಪ್ರೇಮ ಕವನಾಗಿದೆ. ಪ್ರೀತಿಯ ಹುಚ್ಚು ಹಿಡಿಸಿದವಳನ್ನು ನೆನಸಿಕೊಂಡು ಕವಿ ಹಾಡುತ್ತಾನೆ.

"ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ
.......................................
.......................................
ದುಂಬಿಗಳ ದಾಳಿಯಲ್ಲಿ."[೫]

ಗೆಳತಿಯ ಸೌಂದರ್ಯ ಅಪರಮಿತ ವರ್ಣಿಸುವಂತಹದು ಮಲ್ಲಿಗೆಯಂತಹ ಮೈ ಅತಿ ಕೋಮಲ ಅದಕ್ಕಾಗಿ ಕವಿ ಅವಳಿಗೆ ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ ಅಡ್ಡಾಡಬೇಡ ಬೆಳ್ಳಿಯ ಕಿರಣ ನಿನ್ನ ಮೈಯ್ಯ ಸುಟ್ಟಿತು. ಇಳಿಜಾರಿನ ಕಣಿವೆಯಲ್ಲಿ ಇಳಿಯಬೇಡ ಕಾಲಿಗೆ ಮೊಲಗಳ ಹಿಂಡು ಮುತ್ತುವುದು. ಈ ಊರು ಬನಕೊಬ್ಬಳೇ ಒಚಿಟಿ ಹೋರಾಡಿ ಅರಳಿ ಮಕರಂದವೆಂಬ ದುಂಬಿಗಳ ದಾಳಿಯಲ್ಲಿ ಮರೆಯಾಗಬೇಡ ಎಂದು ಕವಿಯು ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

"ನಿನ್ನಂತರಂಗದಲ್ಲೊಂದು ನೋವು
...............................................
...............................................
ಮನಸಿತ್ತು ಮುಗಿಲಿನಲ್ಲಿ"[೭]

ಕವಿಯು ಅವಳ ಅಂತರಂಗದಲ್ಲಿ ನೋವಾಗಿ ನಿಂತನು. ಗೆಳಗಿ ತನ್ನಗೊಪ್ಪುವಂತ ಚಂದಿರನ ಕಣ್ಣು ಬೆಳಕಾಗಿ ಕೂಡಿಕೊಂಡಳು. ಅವಳು ಕೊಟ್ಟ ಒಲವು ಕವಿಯ ಕೊಟ್ಟ ವಿಷವು ಒಂದಾಗಲಾರವು. ಅವಳು ಜೀವ ಕೊಟ್ಟರೆ ಕವಿ ಸಾವು ಕೊಟ್ರೆ ಇವು ಸಮನಾಗಲಾರವು. ಕಂಡಂಥ ಕನಸು ಫಲಿಸಲಿಲ್ಲ. ಪ್ರೀತಿ ಕೈಗೂಡದಕ್ಕೆ ಕವನದ ನಾಯಕನೇ ಹೊಣೆ ಪ್ರೇಮ ದುರಂತದಲ್ಲಿ ಕೊನೆಗೊಳ್ಳುವುದು ಎಂಬುವುದು ಕವಿಯ ಭಾವನೆಯನ್ನು ವ್ಯಕ್ತಪಡಿಸಿರುವುದು ತಿಳಿದು ಬರುತ್ತದೆ.

## ಅಡಿ ಟಿಪ್ಪಣಿ

೧ ದಳವಾಯಿ ರಾಜಪ್ಪ : ಕನ್ನಡ ಸಾಹಿತ್ಯಕೋಶ. ಪುಟ – ೧೮೩–೧೮೪
೨ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ : ಪು – ೬೯
೩ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ : ಪು – ೭೦
೪ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ : ಪು – ೭೧
೫ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ : ಪು – ೭೧–೭೨
೬ ಬಡಿಗೇರ ಮಹಾದೇವ : ಹೊಸಗನ್ನಡ ಕಾವ್ಯ : ಪು – ೩
೭ ಬಡಿಗೇರ ಮಹಾದೇವ್ಪ : ಹೊಸಗನ್ನಡ ಕಾವ್ಯ : ಪು – ೭೩–೭೪



**ಡಾ. ಶಿವಗಂಗಾ ಯು. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**